ಶಿಕಾರಿಪುರ ತಾಲ್ಲೂಕಿನ 'ಹರಿಜನವಾಡಿ' ಕೆಲಸ ಮಂದಗತಿಯಿಂದ ನಡೆಯುತ್ತಿರುವ ಬಗ್ಗೆ

೧೧೮ (೨೮೫) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ 2½ ವರ್ಷದ ಹಿಂದೆ ಮಂಜೂರಾಗಿರುವ ಹರಿಜನವಾಡ ರಸ್ತೆಗಳಾದ ಕಡೇನಂದಿಹಳ್ಳಿ, ಚಿಕ್ಕಮಾಗಡಿ ಮತ್ತು ಹಿರೆಜಂಬೂರು ಗ್ರಾಮದ ರಸ್ತೆಗಳ ಕೆಲಸವು ನಿಧಾನ ಗತಿಯಿಂದ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ೩ ಕಾಮಗಾರಿಗಳಿಗೆ ಮಂಜೂರಾಗಿರುವ ಹಣವೆಷ್ಟು ? ಈವರೆಗೆ ಖರ್ಚಾಗಿರುವ ಹಣವೆಷ್ಟು ?

ಇ) ಬೇಜವಾಬ್ದಾರಿ ವರ್ತನೆಗೆ ಸಂಬಂಧಪಟ್ಟವರ ಮೇಲೆ ಸರ್ಕಾರದವರು ಕ್ರಮ ಕೈಗೊಂಡು ಈ ವರ್ಷವಾದರೂ ಈ ಕೆಲಸವನ್ನು ಮುಗಿಸಲು ಆದೇಶ ನೀಡುವರೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ೩ ರಸ್ತೆಗಳ ಕೆಲಸವು ೧೯೮೪-೮೫ರಲ್ಲಿ ಮಂಜೂರಾಗಿದ್ದು ಎಲ್ಲಾ ಕೆಲಸಗಳೂ ಪ್ರಗತಿಯಲ್ಲಿವೆ.

ಆ) ಈ ಕಾಮಗಾರಿಗಳಿಗೆ ಮಂಜೂರಾಗಿರುವ ಹಣ ಮತ್ತು ವೆಚ್ಚದ ವಿವರಗಳನ್ನು ಕೆಳಗೆ ಕೊಡಲಾಗಿದೆ.

	ಆನುಮೋದಿನ ಅಂದಾಜು ಮೊತ್ತ	೮೪-೮೫ ಮತ್ತು ೮೫-೮೬ರ		೮೬-೮೭ರ ಸಾಲಿಗೆ	
		ಒಟ್ಟು ಆನುಧಾನ	ಒಟ್ಟು ವೆಚ್ಚ	ಒಟ್ಟು ಆನುಧಾನ	ಈವರೆಗೆ ವೆಚ್ಚ
		(ಲಕ್ಷ ರೂ. ಗಳಲ್ಲಿ)			
೧. ಚಿಕ್ಕ ಮಾಗಡಿ ಹರಿಜನ ಕಾಲೋನಿಗೆ ರಸ್ತೆ	೩.೫೦	೧.೭೦	೨.೦೫	೨.೦೦	ಇಲ್ಲ
೨. ಹಿರೇಜಂಬೂರು ಹರಿಜನ ಕಾಲೋನಿ ರಸ್ತೆ	೩.೫೦	೧.೪೦	೧.೪೪	೨.೦೦	೦.೨೮
೩. ಕಡೇನಂದಿಹಳ್ಳಿ ಹರಿಜನ ಕಾಲೋನಿ ರಸ್ತೆ	೪.೨೦	೧.೬೦	೦.೭೦	೩.೦೦	ಇಲ್ಲ

ಇ) ಈ ಕೆಲಸಗಳ ಪ್ರಗತಿಯನ್ನು ಚುರುಕುಗೊಳಿಸಿ ಕೊಟ್ಟಿರುವ ಆನುಧಾನವನ್ನು ಪೂರ್ತಿಯಾಗಿ ಖರ್ಚು ಮಾಡುವಂತೆ ಸೂಚನೆಯನ್ನು ನೀಡಲಾಗುವುದು. ಅಧಿಕಾರಿಗಳ ಭಾಗದಲ್ಲಿ ತಪ್ಪಿದರೆ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರೋಣ ತಾಲ್ಲೂಕಿನ ಒಣ ಬೇಸಾಯ ಅಭಿವೃದ್ಧಿ ಬಗ್ಗೆ

೧೨೦ (೩೦೪) ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬರಗಾಲ ನಿರೋಧಕ (ಡ್ರಾಟ್ ಪ್ರೂಫಿಂಗ್) ಕ್ರಮಗಳ ಅನ್ವಯ ರೋಣ ತಾಲ್ಲೂಕಿನಲ್ಲಿ ಒಣ ಬೇಸಾಯ ಅಭಿವೃದ್ಧಿ ಮಂಡಳಿಯಿಂದ ಯಾವ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ?

ಆ) ರೋಣ ತಾಲ್ಲೂಕಿನ ಬೇವಿನಕಟ್ಟೆ ನಾಲಾ ಯೋಜನೆಯನ್ನು ಮಂಜೂರು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಈ ಯೋಜನೆಯ ಅನುಷ್ಠಾನಕ್ಕೆ ಹಾಗೂ ಪೂರ್ಣಗೊಳಿಸಲು ನಿಗದಿತ ಅವಧಿ ಇದೆಯೆ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

ಅ) ರೋಣ ತಾಲ್ಲೂಕು ಖುಷ್ಕಿ ಭೂ ಅಭಿವೃದ್ಧಿ ಮಂಡಳಿಯು ಕಾರ್ಯಕ್ಷಾಪ್ತಿಯಲ್ಲಿ ಬರುವುದಿಲ್ಲ.

ಆ) ಈ ಯೋಜನೆಯನ್ನು ಮಂಜೂರು ಮಾಡುವ ಪ್ರಸ್ತಾಪ ಸಧ್ಯಕ್ಕೆ ಬರುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿ ರಸ್ತೆಗಳ ಅಭಿವೃದ್ಧಿ ಬಗ್ಗೆ

೧೨೧ (೨೯೭) ಶ್ರೀ ಜ್ಞಾನದೇವ ದೊಡ್ಡ ಮೋಟಿ(ರೋಣ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಈನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರದವರು ರಸ್ತೆಗಳ ಅಭಿವೃದ್ಧಿ ದೃಷ್ಟಿಯಿಂದ ಧಾರವಾಡ ಜಿಲ್ಲೆಯಲ್ಲಿ ಹಿಂದುಳಿದ ಪ್ರದೇಶಗಳೆಂದು ಯಾವ ಯಾವ ತಾಲ್ಲೂಕುಗಳನ್ನು ಗುರುತಿಸಿದ್ದಾರೆ ?

ಆ) ಹಿಂದುಳಿದ ತಾಲ್ಲೂಕ್‌ಗಳೆಂದು ಪರಿಗಣಿಸಲ್ಪಟ್ಟ ತಾಲ್ಲೂಕುಗಳಿಗೆ ವಿಶೇಷ ಅನುದಾನವನ್ನೇ ನಾದರೂ ನೀಡಲಾಗಿದೆಯೇ ?

ಇ) ಹಾಗಿದ್ದಲ್ಲಿ, ಅನುದಾನದ ವಿವರಗಳನ್ನು ನೀಡುವುದು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ?

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈನೇ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆಗಳ ಅಭಿವೃದ್ಧಿ ದೃಷ್ಟಿಯಿಂದ ಹಿಂದುಳಿದ ಪ್ರದೇಶಗಳೆಂದು ಧಾರವಾಡ ಜಿಲ್ಲೆಯಲ್ಲಿ ಮುಂಡರಗಿ ಹಾಗೂ ರೋಣ ತಾಲ್ಲೂಕುಗಳೆಂದು ಗುರುತಿಸಲ್ಪಟ್ಟಿವೆ.

ಆ) ಈ ತಾಲ್ಲೂಕುಗಳಿಗೆ ವಿಶೇಷ ಅನುದಾನ ನೀಡಿರುವುದಿಲ್ಲ. ಆದರೆ ಈ ತಾಲ್ಲೂಕುಗಳಲ್ಲಿ ೧೯೭೧ ರಲ್ಲಿ ೧೦೦ ಚ. ಕಿ. ಮೀ.ಗೆ ೨೦ ರಿಂದ ೨೧ ಕಿ: ಮೀ. ಉದ್ದ ರಸ್ತೆ ಇದ್ದಿದ್ದು, ಈಗ ೩೨ ರಿಂದ ೩೫ ಕಿ. ಮೀ. ಉದ್ದ ಇವೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಪಿ. ಯು. ಸಿ. ಮಂಡಳಿ ವಿಂಗಡನೆಯ ಬಗ್ಗೆ

೧೨೨(೧೦೦) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಒಂದೇ ಪಿ.ಯು. ಸಿ. ಮಂಡಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಉತ್ತೀರ್ಣತೆಯಲ್ಲಿ ಪಕ್ಷಪಾತ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಂತೆ ಪಿ. ಯು. ಸಿ. ಮಂಡಲಿಗಳನ್ನು ವಿಂಗಡಿಸಲು ತಡವಾಗಿರುವುದಕ್ಕೆ ಕಾರಣಗಳೇನು ?

ಆ) ರಾಜ್ಯದ ಪ್ರತಿ ಕಂದಾಯ ವಿಭಾಗದ ಆಡಿಯಲ್ಲಿ ಬರುವ ಪರೀಕ್ಷೆಯ ಫಲಿತಾಂಶವನ್ನು ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೆ ಶೇಕಡಾವಾರು ಪ್ರಕಾರ ಕೊಡುವುದು ?